

# ಹವಳ ಸೌಂದರ್ಯದ ಯುಗಳ

ತಿಜೋರಿಯಲ್ಲಿ ಎಷ್ಟೇ ಒಡವೆಗಳಿರಲಿ, ಕಿತ್ತಳೆ ಕೆಂಪು ಮಿಶ್ರಿತ ಹವಳದ ಒಡವೆ ಇಲ್ಲದೇ ಹೋದರೆ ಆಭರಣ ಸಂಗ್ರಹವೇ ಅಪೂರ್ಣ. ರೇಷ್ಮೆ ಸೀರೆ ಉಟ್ಟಾಗ ಹವಳ ಹಾಕಿದ ಉದ್ದನೆಯ ಹಾರ ಅಥವಾ ನೆಕ್ಲೇಸ್ ಧರಿಸಿದರೆ ಸಖತ್ ಲುಕ್ ಕೊಡುತ್ತದೆ.

■ ಯು. ಅನಂತ್

ಕಣ್ಣು ಕೋರೈಸುವ ವಜ್ರದೊಡವೆ ಇದ್ದರೂ, ನೀಲ, ಪಚ್ಚೆ, ರೂಬಿ ಮುಂತಾದ ಹರಳುಗಳ ಆಭರಣ ತಿಜೋರಿಯಲ್ಲಿದ್ದರೂ ಮೋಹಕ ಬಣ್ಣದ ಹವಳದ ಸರ, ನೆಕ್ಲೇಸ್, ಬಳೆ ಇಲ್ಲದಿದ್ದರೆ ಅಪೂರ್ಣ ಎನಿಸುವುದು ಸಹಜ. ಆಳ ಸಮುದ್ರದಲ್ಲಿ ಹುಟ್ಟಿ ಮನೆ–ಮನದೊಳಗೆ ಪ್ರವೇಶ ಪಡೆದ ಆಕರ್ಷಕ ಬಣ್ಣದ ಹವಳದ ಆಭರಣ ಎಂದರೆ ಮಹಿಳೆರಿಗೆ ಎಂದಿಗೂ ತೀರದ ದಾಹ.

ಹಾಗೆಂದು ಹವಳದ ಒಡವೆ ಇಂದು ನಿನ್ನೆಯದಲ್ಲ. ಪುರಾತನ ಈಜಿಪ್ಟ್, ರೋಮ್ ಕಾಲದಲ್ಲಿಯೇ ಹವಳದ ಆಭರಣ ಬಹಳ ಖ್ಯಾತಿ ಪಡೆದಿತ್ತು. ಇಂದಿಗೂ 'ಎವರ್‌ಗ್ರೀನ್ ರಾಣಿ'ಯಂತೆ ಮೆರೆಯುತ್ತಿರುವುದು ಹವಳದೊಡವೆಗಳೇ. ಜನಪದರು ಸಹ ಹವಳವನ್ನು ವರ್ಣಿಸಿದ್ದು 'ಹವಳದಂಥ ತುಟಿ'. 'ಹವಳದಂಥ ಬಣ್ಣ' ಎಂದೇ. ಹೀಗೆ ಮೋಹಕ ರಂಗಿನ ಮನಮೋಹಕ ಹವಳಕ್ಕೆ ಮನಸೋಲದವರೇ ಇಲ್ಲ.

